ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **167/2019**

ದಿನಾಂಕ **10.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿ ತೆಲುಗು ಭಾಷೆ ಬಲ್ಲವರಾಗಿದ್ದು, ಕನ್ನಡ ಭಾಷೆ ಸರಿಯಾಗಿ ಬಾರದ ಕಾರಣ ಶ್ರೀ.ಎನ್.ಎನ್.ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿ, ಪ್ರಮಾಣ ವಚನ ಬೋಧಿಸಿ ಸಾಕ್ಷಿಯ ಸಾಕ್ಷವನ್ನು ಬರೆದುಕೊಳ್ಳಲಾಯಿತು.

ಪಿ.ಡಬ್ಲ್ಯೂ-2

ಪಾಟೀ ಸವಾಲುಃ 1, 2, 4 ನೇ ಪ್ರತಿವಾದಿಯ ಪರ ಶ್ರೀ.ಎನ್.ಎನ್.ಆರ್ ವಕೀಲರಿಂದಃ

ನನ್ನದು ಬ್ಯಾಡನೂರು ಗ್ರಾಮ ಎಂದರೆ ಸರಿ. ವಾದಿಯದು ಪಾಲಕುಂಟೆ ಗ್ರಾಮ ಎಂದರೆ ಸರಿ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ ವಾದಿ ಹೀಗೆ ಹೇಳಿ ಎಂದು ಹೇಳಿದ್ದರಿಂದ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಎಲ್ಲಾ ಸರ್ವೆ ನಂಬರ್ ಗಳ ಬಗ್ಗೆ ಗೊತ್ತಿಲ್ಲ, ಆದರೆ 7 ಎಕರೆ ಜಮೀನು ವಾದಿಗೆ ಇದೆ. ಸದರಿ 7 ಎಕರೆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಮತ್ತು ವಾದಿ ಒಂದೇ ಊರಿನವರು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸುಳ್ಳು. ನಾನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ನಮ್ಮ ಊರು ಬ್ಯಾಡನೂರು ವಾದಿಯದು ಪಾಲಕುಂಟೆ ಎಂದು ಬರೆಸಿದ್ದೇನೆ. ವಾದಿ ಸಲ್ಲಿಸಿದ ದಾವೆಯ ಬಗ್ಗೆ ನನಗೇನೂ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ